# ಕಾರ್ಮಿಕರ ಜೀವಕ್ಕೆ ಬೆಲೆಯಿಲ್ಲವೇ..................?

ಆತ್ಮೀಯ ಕಾರ್ಮಿಕರೇ,

ಶಾಲಿನಿ ಕ್ರಿಯೇಶನ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಪದ್ಮಾವತಿಯವರು ನಿನ್ನೆ ಅಂದರೆ, 18.9.2007 ರಂದು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೃತಪಟ್ಟ ಘಟನೆಯು, ಕಾರ್ಮಿಕರ ಜೀವಕ್ಕೆ ಯಾವುದೇ ಬೆಲೆಯಿಲ್ಲವೆಂದು ಮತ್ತೊಮ್ಮೆ ನಿರೂಪಿಸಿದೆ.

ನಿನ್ನೆಯವರೆಗೂ ನಮ್ಮೊಡನೆ ಕೆಲಸ ಮಾಡುತ್ತಿದ್ದ ಕಾರ್ಮಿಕರೊಬ್ಬರು ಆಡಳಿತ ವರ್ಗದ ನಿರ್ಲಕ್ಷ್ಯದಿಂದಾಗಿ ಇಂದು ನಮ್ಮೊಂದಿಗೆ ಇಲ್ಲವಾಗಿದ್ದಾರೆ. ಕೆಲಸ ಮಾಡುವ ಸಮಯದಲ್ಲಿ ಕಾರ್ಮಿಕರ ರಕ್ಷಣೆಯ ಹೊಣೆ ಮಾಲೀಕರದೇ ಆಗಿದೆ. ಆದರೆ ಮಾಲೀಕರು ಕಾರ್ಮಿಕರನ್ನು ಯಂತ್ರದಂತೆ ದುಡಿಸಿಕೊಳ್ಳುತ್ತಿದ್ದಾರೆಯೇ ಹೊರತು ಅವರ ಜೀವಕ್ಕೆ ಯಾವುದೇ ಬೆಲೆ ನೀಡುತ್ತಿಲ್ಲ. ಕೆಲಸ ಮಾಡುತ್ತಿದ್ದಾಗ ಉಂಟಾದ ಪದ್ಮಾವತಿಯವರ ಸಾವು ನಮ್ಮಲ್ಲಿ ಹಲವಾರು ಪ್ರಶ್ನೆಗಳನ್ನು ಮೂಡಿಸುತ್ತಿದೆ.

- ಪದ್ಮಾವತಿಯವರು ಹುಷಾರಿಲ್ಲದೆ ರಜೆ ಕೇಳಿದಾಗ ತಕ್ಷಣ ರಜೆ ಏಕೆ ನೀಡಲಿಲ್ಲ?
- ಪದ್ಮಾವತಿಯವರು ಅಸ್ವಸ್ಥರಾದಾಗ ಅವರನ್ನು ಆಸ್ಪತ್ರೆಗೆ ಏಕೆ ಕರೆದುಕೊಂಡು ಹೋಗಲಿಲ್ಲ?
- ಅವರ ಜೊತೆಗೆ ಯಾರನ್ನೂ ಕಳುಹಿಸಿದೆ ಒಬ್ಬರನ್ನೇ ಏಕೆ ಕಳುಹಿಸಿದರು?
- ಅಸ್ವಸ್ಥರಾದ ಅವರಿಗೆ ಚಿಕಿತ್ಸೆ ನೀಡಲು ತುರ್ತು ವೈದ್ಯರನ್ನು ಹಾಗೂ ಆಂಬುಲೆನ್ಸ್ ಏಕೆ ಕರೆಸಲಿಲ್ಲ?
- ತಕ್ಷಣವೇ ಪದ್ಮಾವತಿಯವರಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ ದೊರಕಿದ್ದರೆ ಅವರು ಬದುಕುಳಿಯುತ್ತಿರಲಿಲ್ಲವೇ?

ಸ್ನೇಹಿತರೇ, ಇದು ಮೊದಲನೆಯ ಘಟನೆಯಲ್ಲ, ಪದ್ಮಾವತಿಯವರಿಗೆ ಆದ ಘಟನೆ ನಾಳೆ ನಮಗೂ ಆಗಬಹುದು. ಆದ್ದರಿಂದ ಕಾರ್ಖಾನೆಗಳಲ್ಲಿ ಕಾರ್ಮಿಕರ ಸುರಕ್ಷತೆಗೆ ಹಾಗೂ ಆರೋಗ್ಯ ರಕ್ಷಣೆಗೆ ಸಾಕಷ್ಟು ಕ್ರಮ ಕೈಗೊಳ್ಳಬೇಕೆಂದು ಹಾಗೂ ಮೇಲಿನ ಪ್ರಶ್ನೆಗಳಿಗೆ ಆಡಳಿತ ವರ್ಗದವರು ಸೂಕ್ತ ಉತ್ತರ ನೀಡಬೇಕೆಂದು ಆಗ್ರಹಿಸುತ್ತಾ, ಪದ್ಮಾವತಿಯೊಬ್ಬರ ಆತ್ಮಕ್ಕೆ ಶಾಂತಿ ಸಿಗಲೆಂದು ನಾವು ಈ ಮೂಲಕ ಶ್ರದ್ಧಾಂಜಲಿ ಅರ್ಪಿಸುತ್ತಿದ್ದೇವೆ.

---

ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್, (GATWU)

Scanned with OKEN Scanner